ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ ಹಾನಗಲ್

ಸಿ. ಸಿ. ನಂ.**1190/2024.**

| | | | |
|---|---|---|---|
| ಸಾಕ್ಷಿಧಾರರ ಹೆಸರು | : ವಿನಯ ಬೇಂದ್ರೆ | ಪಿಡಬ್ಲ್ಯೂ | 03 |
| ತಂದೆ:ಗಂಡನ ಹೆಸರು | : ರಾಜಾರಾಮ | ಸಿಡಬ್ಲ್ಯೂ | 04 |
| ವಯಸ್ಸು | : 31 ವರ್ಷ | | |
| ಉದ್ಯೋಗ | : ಅಬಕಾರಿ ಪೇದೆ | | |
| ವಾಸಸ್ಥಳ | : ಹಾನಗಲ್ | | |

ದಿನಾಂಕ **11.02.2025** ರಂದು ಸಾಕ್ಷಿಧಾರರಿಗೆ ಪ್ರಮಾಣ ವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆ: ಸಹಾಯಕ ಸರಕಾರಿ ಅಭಿಯೋಜಕರಿಂದ

ದಿನಾಂಕ 23.08.2019 ರಿಂದ ಇಲ್ಲಿಯವರೆಗೆ ನಾನು ಅಬಕಾರಿ ಕಚೇರಿ ಹಾನಗಲ್ ದಲ್ಲಿ ಅಬಕಾರಿ ಪೇದೆ ಅಂತಾ ಕರ್ತವ್ಯ ನಿರ್ವಹಿಸುತ್ತಿದ್ದೇನೆ.

2. ದಿನಾಂಕ 10.04.2024 ರಂದು ರಾತ್ರಿ 8.15 ಗಂಟೆಗೆ ಮಹಾರಾಜಪೇಟೆ ಗ್ರಾಮದಲ್ಲಿ ಲೋಕಸಭಾ ಚುನಾವಣೆ ನಿಮಿತ್ತ ಚಾಸಾ-1 ರವ ರು ನಮ್ಮೊಂದಿಗೆ ಗಸ್ತು ಕಾರ್ಯ ನಿರ್ವಹಿಸುತ್ತಿರುವಾಗ ಚಾಸಾ-1 ರವರಿಗೆ ನಿಟಗಿನಕೊಪ್ಪ ಗ್ರಾಮದಲ್ಲಿ ರಾಜು ಓಣಿಕೇರಿ ಎಂಬಾತನ ಮನೆಯಲ್ಲಿ ಅಕ್ರಮವಾಗಿ ಮದ್ಯ ಸಂಗ್ರಹಿಸಿಟ್ಟು ಮಾರಾಟ ಮಾಡುತ್ತಿದ್ದಾನೆ ಅಂತಾ ಬಾತ್ಮಿ ಬಂದಿದ್ದು, ಆ ಬಾತ್ಮಿಯನ್ನು ಪರಿಶೀಲಿಸಲು ಅಲ್ಲಿಯೇ ಬಸ್ ನಿಲ್ದಾಣ ಹತ್ತಿರ ಇದ್ದ ಚಾಸಾ-2 ಮತ್ತು 3 ರವರನ್ನು ವಿಚಾರಿಸಿ ಅವರಿಗೆ ನಮ್ಮ ಉದ್ದೇಶ ತಿಳಿಸಿ ಪಂಚರಾಗಲು ಕೇಳಿಕೊಂಡೆವು ಅವರು ಒಪ್ಪಿಕೊಂಡರು. ಇಲಾಖಾ ವಾಹನ ನಂ. ಕೆಎ. 27 ಜಿ-0460 ನೇದ್ದರಲ್ಲಿ ಹೊರಟು ಬಾತ್ಮಿ ಬಂದ ವಿಳಾಸಕ್ಕೆ ಹೋಗಿ ನೋಡಿದಾಗ ಅದು ಆರ್ಸಿಸಿ ಮನೆಯಾಗಿತ್ತು. ಅಲ್ಲಿಯೇ ಶೋಧನಾ ಸಮುಚಿತ ವರದಿಯನ್ನು ತಯಾರಿಸಿ ಪಂಚರೊಂದಿಗೆ ಮನೆಯಲ್ಲಿ ಯಾರಿದ್ದೀರಾ ಅಂತಾ ಕೂಗಲಾಗಿ ಸುಮಾರು 40-45 ವರ್ಷ ವಯಸ್ಸಿನವರು ಹೊರಗಡೆ ಬಂದಿದ್ದು ಅವರಿಗೆ ನಾವು ಬಂದ ವಿಷಯ ತಿಳಿಸಿದೆವು. ಅವರ ಹೆಸರು ರಾಜಪ್ಪ ಓಣಿಕೇರಿ ಅಂತಾ ತಿಳಿಸಿದರು. ಶೋಧನಾ ಮಾಡಲು ಮನೆಯೊಳಗೆ ಹೋದೆವು. ಹಾಲ್ ನಲ್ಲಿ ಬಲಗಡೆ ಇದ್ದ ಸೋಫಾ ಸೆಟ್ ನ ಅದರ ಕೆಳಗಡೆ ಹಳದಿ ಬಣ್ಣದ ಗೊಬ್ಬರ ಚೀಲವನ್ನು ಪರಿಶೀಲಿಸಿದಾಗ ಅದರಲ್ಲಿ 90 ಎಲ್ ನ ಓ ಆರ್ ಸಿ 120

ಪಾಕೇಟುಗಳು ದೊರೆತವು. ಅದರ ಮೇಲೆ ಅಡೆಸಿವ್ ನಂಬರನ್ನು ಅಳಿಸಲಾಗಿತ್ತು. ಆರೋಪಿಯನ್ನು ಎಲ್ಲಿಂದ ತಂದಿದ್ದೀಯಾ ಅಂತಾ ಕೇಳಿದರೆ ಸರಿಯಾಗಿ ಉತ್ತರಿಸಿಲಿಲ್ಲ. ಪರವಾನಿಗೆ ಕೇಳಿದರೆ ಹಾಜರುಪಡಿಸಲಿಲ್ಲ. ಆ 120 ಪಾಕೇಟುಗಳಿಂದ 30 ಪಾಕೇಟುಗಳನ್ನು ರಾಸಾಯನಿಕ ಪರೀಕ್ಷೆಗಾಗಿ ಪ್ರತ್ಯೇಕವಾಗಿ ತೆಗೆದು ಬಿಳಿ ಬಟ್ಟೆಯಿಂದ ಸುತ್ತಿ, ದಾರದಿಂದ ಹೊಲೆದು ಸರಕಾರಿ ಮೊಹರಿನಿಂದ ಶೀಲು ಮಾಡಲಾಯಿತು. ಮಾದರಿ ಚೀಟಿಯನ್ನು ಅಲ್ಲಿಯೇ ತಯಾರಿಸಿ ಅದಕ್ಕೆ ಪಂಚರು ಮತ್ತು ಅಧಿಕಾರಿಯವರು ಸಹಿ ಮಾಡಿರುವ ಚೀಟಿಯನ್ನು ಅಂಟಿಸಲಾಗಿತ್ತು. ಚಾಸಾ-1 ರವರು ಆರೋಪಿಗೆ 41 ಎ ಕೆಳಗಡೆ ನೋಟಿಸು ನೀಡಿ ಅಲ್ಲಿಯೇ ಬಿಟ್ಟರು. ಪಂಚನಾಮೆಯನ್ನು ರಾತ್ರಿ 8-30 ರಿಂದ 9.30 ಗಂಟೆಯವರೆಗೆ ಪಂಚನಾಮೆಯನ್ನು ಮಾಡಲಾಯಿತು. ಪಂಚನಾಮೆಯನ್ನು ನಾನೇ ಬರೆದಿರುತ್ತೇನೆ. ಅದನ್ನು ಈಗಾಗಲೇ ನಿಪಿ-1 ಎಂದು ಗುರುತಿಸಿದ್ದು, ಸಾಕ್ಷಿ ಸಹಿಯನ್ನು ನಿಪಿ-1(ಸಿ) ಎಂದು ಗುರುತಿಸಲಾಯಿತು. ದಿನಾಂಕಃ 03.07.2024 ರಂದು ಹೇಳಿಕೆ ನೀಡಿರುತ್ತೇನೆ. ಮುದ್ದೆಮಾಲನ್ನು ಗುರುತಿಸಿದ್ದು ಅದನ್ನು ಈಗಾಗಲೇ ಮು.ಮಾ-1 ಎಂದು ಗುರುತಿಸಲಾಗಿದೆ. ಆರೋಪಿಯನ್ನು ನೋಡಿ ಗುರುತಿಸಿರುತ್ತಾರೆ.

ಪಾಟೀ ಸವಾಲುಃ ಆರೋಪಿತರ ಪರ ಶ್ರೀ ಎಸ್ ಎಂ ಯು ವಕೀಲರಿಂದಃ

ಆ ದಿನ ನಾನು ಬೆಳಿಗ್ಗೆ ಕರ್ತವ್ಯಕ್ಕೆ ಹಾಜರಾಗಿರುತ್ತೇನೆ. ಚುನಾವಣೆ ಕುರಿತು ಆ ಕಾಲಕ್ಕೆ ಚೆಕ್ ಪೋಸ್ಟ ಹಾಕಲಾಗಿತ್ತು ಎಂದರೆ ಸರಿ. ಆ ಕಾಲಕ್ಕೆ ನಾವು ಚೆಕ್ ಪೋಸ್ಟ ಗೆ ಭೇಟಿ ನೀಡಿಲ್ಲ. ಮಲ್ಲಿಗಾರ ಮುಖಾಂತರ ಮಹಾರಾಜಪೇಟೆಗೆ ಹೋಗಿರುತ್ತೇವೆ. ಸ್ಥಳಕ್ಕೆ ಹೋದಾಗ ಸಮಯ ಸುಮಾರು 8.15 ಆಗಿತ್ತು. ಚಾಸಾ-1 ರವರು ಪಂಚರನ್ನು ಕರೆದರು. ಆರೋಪಿಯ ಮನೆ ಊರಿನಿಂದ ಹೊರಗಡೆ ಇದೆ ಆಜುಬಾಜು ಮನೆಗಳಿಲ್ಲ. ಎಲ್ಲರರೂ ಸೇರಿಯೇ ಮನೆಯೊಳಗಡೆ ಹೋಗಿರುತ್ತೇವೆ. ಹಳದಿ ಚೀಲವನ್ನು ನಾನೇ ತೆರೆದಿರುತ್ತೇನೆ. ಹಳದಿ ಚೀಲವನ್ನು ಜಪ್ತಿಪಡಿಸಿಕೊಂಡಿರುತ್ತೇವೆ, ಅದನ್ನು ಉಳಿದ ಮು.ಮಾಲಿನೊಂದಿಗೆ ನಾಶಪಡಿಸಿರುತ್ತೇವೆ. ಘಟನಾ ಸ್ಥಳದ ಚಕಬಂದಿ ಹೇಳಲು ಬರುತ್ತದೆ. ಉತ್ತರಕ್ಕೆ ಮನೆ ಚೌಕಟ್ಟು, ಪೂರ್ವಕ್ಕೆ, ದೇವರಕೋಣೆ, ದಕ್ಷಿಣಕ್ಕೆ ಸೋಪಾ ಇತ್ತು, ಪಶ್ಚಿಮಕ್ಕೆ ಗೋಡೆ. ಪಂಚನಾಮೆಯನ್ನು ಮನೆಯೊಳಗಡೆ ಕುಳಿತು ಬರೆದಿರುತ್ತೇವೆ. ಅಡೆಸಿವ್ ನಂಬರ ಅಳಿಸಿದ್ದರೆ ಎಲ್ಲಿಂದ ಖರೀದಿ ಮಾಡಲಾಗಿದೆ ಅಂತಾ ಗೊತ್ತಾಗುವುದಿಲ್ಲ. ಆ ದಿನ ನಾವು ಯಾವುದೇ ದಾಳಿ ಮಾಡಿಲ್ಲ, ಆರೋಪಿ ವಶದಿಂದ ಯಾವುದೇ ಮು.ಮಾ ಜಪ್ತಿಪಡಿಸಿಕೊಂಡಿಲ್ಲ ಎಂದರೆ ಸರಿಯಲ್ಲ. ಯಾವುದೇ ಪಂಚನಾಮೆ ನಾನು ಬರೆದಿಲ್ಲ ಎಂದರೆ ಸರಿಯಲ್ಲ. ಆರೋಪಿಗೂ ಈ ಪ್ರಕರಣಕ್ಕೂ ಯಾವುದೇ ರೀತಿ ಸಂಬಂದ ಇಲ್ಲ ಎಂದರೆ ಸರಿಯಲ್ಲ. ಚುನಾವಣೆ ನಿಮಿತ್ತ ಅಂಕಿ ಸಂಖ್ಯೆಗೋಸ್ಕರ ಆ ದಿನ ಆರೋಪಿ ವಿರುದ್ದ ಸುಳ್ಳು ಪ್ರಕರಣ ದಾಖಲಿಸಲಾಗಿದೆ ಎಂದರೆ

ಸರಿಯಲ್ಲ. ನಮ್ಮ ಮೇಲಾಧಿಕಾರಿಗೆ ಸಹಾಯವಾಗಲಿ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**: ಮರುವಿಚಾರಣೆ : ಇಲ್ಲ.**

**(** ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು**)**

ನ. ಸ. ಓ. ಹೇ. ಕೆ ಸರಿ ಇದೆ
ಎಂದು ಒಪ್ಪಿರುತ್ತಾರೆ.

**Sd/-**

ಹಿರಿಯ ಸಿವಿಲ್ ನ್ಯಾಯಾಧೀಶರು
ಹಾನಗಲ್